ಗೋಗರೆದಾಗ, ನನ್ನ ದುಗುಡವೆಲ್ಲ ಒಯ್ಯನೆ ಮಾಯವಾಗಿ, ಎಲ್ಲಾ ಅನಿಶ್ಚಿತತೆ ಮತ್ತು ಚಿಂತೆಗಳಿಂದ ಬಿಡುಗಡೆಗೊಂಡು, ನಿರಾಳವಾದೆ. ಅವಳು ಕೋರ್ಸ್‌ಗೆ ವಿದಾಯ ಹೇಳಿ, ಎರಡೆ ದಿನದಲ್ಲಿ ಇಬ್ಬರೂ ಹಿಂದಿರುಗುವಂತಾದಾಗ, ಆ ಖುಷಿಯಲ್ಲಿ ಈಗಾಗಲೆ ಚಿಗುರಿದ್ದ ಕತೆಯ ಕಲ್ಪನೆ, ಹೊಸ ಹುರುಪಿನಿಂದ ಮತ್ತಷ್ಟು ರಕ್ತ ಮಾಂಸಗಳನ್ನು ತುಂಬಿಕೊಂಡು ಬೆಳೆಯತೊಡಗಿತು. ಬೆಂಗಳೂರಿಗೆ ಹಿಂದಿರುಗುವಷ್ಟರಲ್ಲಿ ಇಡೀ ಕತೆಯ ಕರುಡು ರೂಪದ ಜೊತೆಗೆ ಕೆಲವು ಪಾತ್ರಗಳು, ಘಟನೆಗಳು, ಮತ್ತು ಕೊಂಡಿಗಳು ಹಬ್ಬಿ ಬೆಳೆದಿದ್ದವು.

ಆದರೆ ಆ ನಂತರದ ಹದಿನೈದು ವರ್ಷಗಳ ಕಾಲ ಏನೂ ಮಾಡದೆ, ಆ ಕತೆಯನ್ನು ಮನಸ್ಸಿನಲ್ಲಿಯೇ ಕಟ್ಟಿಹಾಕಿಕೊಂಡಿದ್ದೆ. ಕಾರಣ, ಕತೆ ಬರೆಯಬಲ್ಲೆ ಎಂಬ ಧೈರ್ಯವಾಗಲಿ, ಅದಕ್ಕೆ ಬೇಕಾದ ಸಂಕಲ್ಪವಾಗಲಿ ನನ್ನಲ್ಲಿ ಮೂಡಿರಲಿಲ್ಲ. ಕೃಷಿವಿಜ್ಞಾನದಲ್ಲಿಯೇ ಜೀವನ ಕಳೆದಿದ್ದ ನನಗೆ, 53ರ ಇಳಿವಯಸ್ಸಿನಲ್ಲಿ ಸಾಹಿತ್ಯಕೃಷಿ ಆರಂಭಿಸಬಲ್ಲೆ ಎಂಬ ಕಲ್ಪನೆಯೇ ಅಸಾಧ್ಯವೆನಿಸಿತ್ತು.

## ನಿದ್ದೆಯಿಂದೆಬ್ಬಿಸಿದ 'ಕೋಡ್'

2006ರ ಆರಂಭದಲ್ಲಿ ಒಂದು ದಿನ. ದೆಹಲಿಗೆ ಹೊರಟಿದ್ದೆ. ಬೆಂಗಳೂರಿನ ವಿಮಾನ ನಿಲ್ದಾಣದ ಪುಸ್ತಕಮಳಿಗೆಯಲ್ಲಿ ಡ್ಯಾನ್ ಬ್ರೋನ್‌ನ 'ಡಾವಿನ್ಸಿ ಕೋಡ್'ನ ಬೆನ್ನುಡಿಯಿಂದ ಆಕರ್ಷಿತಗೊಂಡು ಖರೀದಿಸಿದ್ದೆ. ದೆಹಲಿಯಿಂದ ಹಿಂದಿರುಗುವಾಗ ಅಲ್ಲಿನ ವಿಮಾನ ನಿಲ್ದಾಣದಲ್ಲಿ ಓದಲು ಪ್ರಾರಂಭಿಸಿದೆ. ಒಂದೊಂದೆ ಪುಟ ಓದುತ್ತಿದ್ದಂತೆ ನನ್ನಲ್ಲಿ ಪುಳಕ ಹರಿಯತೊಡಗಿತ್ತು: ಅಲ್ಲಿನ ತಿರುವುಗಳು, ಘಟನೆಗಳು, ವಿವರಗಳು ಮತ್ತು ವಿಷಯಗಳು ತೆರೆದುಕೊಳ್ಳುತ್ತಿದ್ದಂತೆ, ಹದಿನೈದು ವರ್ಷಗಳಿಂದಲೂ ನನ್ನಲ್ಲಿಯೇ ನಿದ್ದೆ ಮಾಡುತ್ತಿದ್ದ ನನ್ನ ಕತೆಯ ವಸ್ತು ಹುಚ್ಚೆದ್ದು ಕುಣಿಯಲಾರಂಭಿಸಿತ್ತು. 'ಡಾವಿನ್ಸಿ ಕೋಡ್'ನ ಮತ್ತು ನನ್ನ ಕಲ್ಪನೆಯ ಕತೆಯ ನಡುವಿನ ಹೋಲಿಕೆ ನನ್ನನ್ನು ಬಡಿದೆಬ್ಬಿಸಿತ್ತು; ಬರೆಯಲು ಪ್ರೇರೇಪಿಸಿತ್ತು.

ಅದೇ ವರ್ಷ ನನಗೆ ಅಪ್ರಸ್ತುತವಾಗಿದ್ದ ಒಂದು ರಾಷ್ಟ್ರೀಯ ಸಮಾವೇಶದಲ್ಲಿ ವಿಧಿ ಇಲ್ಲದೆ ಸಿಕ್ಕಿಹಾಕಿಕೊಂಡು, ಸುಮಾರು ಮೂರು ದಿನಗಳವರೆಗೆ ವ್ಯರ್ಥವಾಗಿ ಕಾಲ ಕಳೆಯಬೇಕಾದ ಸ್ಥಿತಿ ಒದಗಿದಾಗ, ಹೇಗಾದರೂ ನನ್ನ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಯೋಚಿಸಿ ಸಭಾಭವನದ ಒಂದು ಮೂಲೆಯಲ್ಲಿ ಕುಳಿತು ನನಗೆ ತೋಚಿದಂತೆ ಕಾದಂಬರಿಯನ್ನು ಗೀಚತೊಡಗಿದೆ ಇಂಗ್ಲಿಷ್ ಭಾಷೆಯಲ್ಲಿ! ಆ ಮೂರು ದಿನಗಳಲ್ಲಿ ಸುಮಾರು ಐವತ್ತು ಪುಟಗಳಷ್ಟು ಬರೆದು ಮುಗಿಸಿದ್ದೆ. ಕಾದಂಬರಿ ನನಗೇ ಆಶ್ಚರ್ಯವಾಗುವಷ್ಟು ಬೆಳೆದುಕೊಂಡಿತ್ತು; ಅದರ ಗತಿ ಬಹಳವೇ ತೃಪ್ತಿ ಕೊಟ್ಟಿತ್ತು. ನಾನು ನಿಜಕ್ಕೂ ಕಾದಂಬರಿ ಬರೆದು ಮುಗಿಸಬಲ್ಲೆ ಎಂಬ ನಂಬಿಕೆ ದೃಢವಾಗತೊಡಗಿತ್ತು. ಹಾಗೆಂದೆ ಮುಂದಿನ ಕೆಲವು ದಿನಗಳಲ್ಲಿ ಆ ಪ್ರಯತ್ನವನ್ನು ಮತ್ತಷ್ಟು ಮುಂದುವರಿಸುವ ಗಂಭೀರ ತೀರ್ಮಾನ ಕೈಗೊಂಡೆ. ಆದರೆ ಒಂದು ತೊಡಕು ಎದುರಾಗಿತ್ತು!

## ಇಂಗ್ಲಿಷಿನಿಂದ ಕನ್ನಡದತ್ತ U-ಟರ್ನ್

ಕಾದಂಬರಿಯಲ್ಲಿ, ಜೈನ ಸಂಸ್ಕೃತಿ ಮತ್ತು ಕಲೆಯ ಬಗೆಗಿನ ಹಲವು ರಹಸ್ಯಗಳಿಗೆ ದೇಸಿಪದಗಳಲ್ಲಿ ಮತ್ತು ಪದೋಚ್ಚಾರಗಳಲ್ಲಿ ಸುಳಿವುಗಳನ್ನು ಅಡಕಗೊಳಿಸುವ ಫೋನೆಟಿಕ್ ಕೋಡ್‌ಗಳನ್ನು ವಿಶದವಾಗಿ ಬರೆಯಲು ನನಗೆ ಅಡ್ಡವಾಗಿ ನಿಂತಿದ್ದು ಇಂಗ್ಲಿಷ್ ಭಾಷೆ. ಕನ್ನಡದ